# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು – 560056.

ನಂ. ವಿ.ವಿ.ಕಾನೂನು/ಎಲ್.ಎಲ್.ಬಿ.(ಹಾನರ್ಸ್ ಕೋರ್ಸ್)/ಪ್ರವೇಶ/2022–23 ದಿನಾಂಕ: 17.06.2022

## ಅಧಿಸೂಚನೆ

**ಉಲ್ಲೇಖ:** ಕುಲಪತಿಗಳ ಅನುಮೋದನೆ ದಿನಾಂಕ:15.06.2022

ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ಇವರಿಂದ 2022–23ರ ಶೈಕ್ಷಣಿಕ ಸಾಲಿನ ಐದು ವರ್ಷದ ಬಿ.ಎ., ಎಲ್‌ಎಲ್.ಬಿ. (ಹಾನರ್ಸ್ ಕೋರ್ಸ್) ಪದವಿ ಮೊದಲ ಸೆಮಿಸ್ಟರ್ ಕೋರ್ಸ್‌ನ ಪ್ರವೇಶಾತಿ ಕೋರಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ 10+2 ತರಗತಿಯಲ್ಲಿ ಶೇ. 45 (ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಶೇ. 40 ರಷ್ಟು ಹಾಗೂ ಒ.ಬಿ.ಸಿ. ಗೆ ಶೇ. 42 ರಷ್ಟು, ಇವರ ಆದಾಯವು ರೂ. 8 ಲಕ್ಷಕ್ಕಿಂತ ಮೇಲೆ ಮೀರಿರಬಾರದು ಮತ್ತು ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಯಶಸ್ವಿಯಾಗಿ ಪೂರ್ಣಗೊಳಿಸಿರುವವರು ಮಾತ್ರ ಅರ್ಹರಾಗಿರುತ್ತಾರೆ.

**ಸೂಚನೆ:**

1. ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ.ಯನ್ನು (10+2) ಮೂಲ ಅರ್ಹತಾ ತರಗತಿಗಳನ್ನು ಓದದೆ ನೇರವಾಗಿ ಪಡೆದುಕೊಂಡಿದ್ದರೆ ಬಿ.ಎ., ಎಲ್‌ಎಲ್.ಬಿ (ಹಾನರ್ಸ್) ಕೋರ್ಸ್‌ಗೆ ಅರ್ಹರಾಗಿರುವುದಿಲ್ಲ.
2. ಅಭ್ಯರ್ಥಿಗಳು ಜಾಬ್ ಓರಿಯಂಟೆಡ್ ಹಾಗೂ ಡಿಪ್ಲೊಮೊ ಕೋರ್ಸ್‌ಗಳನ್ನು ಮಾಡಿದ್ದರೆ ಬಿ.ಎ., ಎಲ್‌ಎಲ್.ಬಿ (ಹಾನರ್ಸ್) ಕೋರ್ಸ್‌ಗೆ ಅರ್ಹರಾಗುವುದಿಲ್ಲ.

ವಯಸ್ಸಿನ ಮಿತಿ: ಸಾಮಾನ್ಯ ವರ್ಗ 20 ವರ್ಷ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಒ.ಬಿ.ಸಿ. ಮತ್ತು ಅಂತರಾಷ್ಟ್ರೀಯ ಅಭ್ಯರ್ಥಿಗಳಿಗೆ 22 ವರ್ಷಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಮೀರಿರಬಾರದು. ಅರ್ಜಿ ಶುಲ್ಕ: ಸಾಮಾನ್ಯ ವರ್ಗ–ರೂ. 850/–, ಅಭ್ಯರ್ಥಿಗಳು ಪ.ಜಾ./ಪ.ಪಂ./ವರ್ಗ–1 ರೂ. 550/–. ಅಭ್ಯರ್ಥಿಗಳು ಸಾಮಾನ್ಯ ಮತ್ತು ಸೆಲ್ಫ್ ಫೈನಾನ್ಸ್ ಸೀಟು ಎರಡಕ್ಕೂ ಅರ್ಜಿ ಸಲ್ಲಿಸಬಯಸಿದರೆ ಅದರ ಕುರಿತಾಗಿ ನಮೂನೆಯಲ್ಲಿ ಸ್ಪಷ್ಟವಾಗಿ ತಿಳಿಸಬೇಕು.

ಆಸಕ್ತಿಯುಳ್ಳ ಅಭ್ಯರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯ ವೆಬ್‌ಸೈಟ್: www.bangaloreuniversity. ac.in or www.ulcbangalore.com ನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಪಟ್ಟ ಎಲ್ಲಾ ದಾಖಲೆ ಹಾಗೂ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವ ಮುಖಾಂತರ ಭರ್ತಿ ಮಾಡಿದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಕೊನೆಯ ದಿನಾಂಕ: 15–07–2022ರ ಒಳಗಾಗಿ ಸಲ್ಲಿಸುವುದು ಮತ್ತು ಅದರ ಒಂದು ಪ್ರತಿಯನ್ನು ದಾಖಲೆಗಳ ಸಹಿತ **ಪ್ರಾಂಶುಪಾಲರು,** ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು–560 056 ಇವರಿಗೆ ದಿನಾಂಕ: 20–07–2022 ರೊಳಗಾಗಿ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ ನೋಡಬಹುದು ಅಥವಾ ದೂರವಾಣಿ ಸಂಖ್ಯೆ: 080–22961172 / 1174 ಗೆ ಸಂಪರ್ಕಿಸಬಹುದು.

ಕುಲಸಚಿವರು